ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ. ಸಿ. ಸಂಖ್ಯೆ: 2073/24**

ಪಿಡಬ್ಲ್ಯು: - 2

ದಿನಾಂಕಃ 25.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಪಿ ಹೆಚ್ ಟಿ ರವರಿಂದಃ-

ನಾನು ಎಂ. ಎ. ಎಕನಾಮಿಕ್ಸ್ ಪದವೀಧರೆ. ನನ್ನ ತಾಯಿ ಅಂಗನವಾಡಿಯಲ್ಲಿ ಹೆಲ್ಪರ್ ಆಗಿ ಕೆಲಸ ಮಾಡುತ್ತಾರೆ. ನನ್ನ ತಾಯಿಗೆ ತಿಂಗಳಿಗೆ ರೂ.7,000/- ಸಂಬಳ ಬರುತ್ತದೆ. ನಮ್ಮ ಮನೆಯಲ್ಲಿ ಒಟ್ಟು 4 ಜನ ಇದ್ದೇವೆ. ನಮ್ಮ ಮನೆಯ ಖರ್ಚಿಗೆ ತಿಂಗಳಿಗೆ ರೂ.15,000/- ಬೇಕಾಗುತ್ತದೆ. ನನ್ನ ತಂದೆ ಸರ್ಕಾರಿ ನೌಕರರಾಗಿದ್ದಾರೆ, ಅವರಿಗೆ ಸುಮಾರು ರೂ.40,000/- ಸಂಬಳ ಬರುತ್ತದೆ. ನನ್ನ ತಂದೆಯ ಸ್ಯಾಲರಿ ಸರ್ಟಿಫಿಕೇಟನ್ನು ನಾನು ಹಾಜರು ಮಾಡಿಲ್ಲ ಎಂದರೆ ಸರಿ. ನನ್ನ ತಂಗಿ ಶ್ರೀ ರಾಮ್ ಫೈನಾನ್ಸ್‌ನಲ್ಲಿ ಕೆಲಸ ಮಾಡುತ್ತಾರೆ.

ಗಿರೀಶ್ ನನಗೆ ಸುಮಾರು 5 ವರ್ಷಗಳಿಂದ ಪರಿಚಯ ಇರುತ್ತಾರೆ, ಅವರು ನನಗೆ ಮಡಿಕೇರಿಯಲ್ಲಿ ಪರಿಚಯ ಆಗಿದ್ದರು. ಸದರಿ ಗಿರೀಶ್ ನಮ್ಮ ದೂರದ ಸಂಬಂಧಿ ಎಂದರೆ ಸರಿಯಲ್ಲ. ಸದರಿ ಗಿರೀಶ್ ನಮ್ಮ ಜನಾಂಗದವರು ಎಂದರೆ ಸರಿ. ಗಿರೀಶ್ ಸ್ವತಃ ನನ್ನ ಬಳಿ ಬಂದು ನನಗೆ ಕೆಲಸ ಕೊಡಿಸುವುದಾಗಿ ಹೇಳಿದ್ದು ಮತ್ತು ಕೆಲಸಕ್ಕೆ ಹಣ ಕೊಡಬೇಕಾಗುತ್ತದೆ ಎಂದು ಹೇಳಿದರು. ಈ ವಿಚಾರವನ್ನು ನಾನು ನನ್ನ ತಾಯಿ ಬಳಿ ಹೇಳಿದೆ. ಅದಕ್ಕೆ ನನ್ನ ತಾಯಿ ಮೊದಲು ಮದುವೆಯಾಗಲಿ ಆಮೇಲೆ ನೋಡೋಣ ಎಂದು ಹೇಳಿದರು. ಗಿರೀಶ್ ರವರು ನನ್ನ ತಾಯಿ ಜೊತೆ ಫೋನಿನಲ್ಲಿ ಮಾತನಾಡಿದರು ಮತ್ತು ಆರೋಪಿ ಜೊತೆ ಕೂಡ ಫೋನಿನಲ್ಲಿ ಮಾತನಾಡಿದರು. ಆರೋಪಿಯೇ ಕೆಲಸ ಕೊಡಿಸುವವರು ಎಂದು ಹೇಳಿ ಗಿರೀಶ್ ರವರು ನಮಗೆ ಹೇಳಿ ಆರೋಪಿಯೊಂದಿಗೆ ಮಾತನಾಡಿಸಿರುತ್ತಾರೆ. ಆಗ ನನಗೆ ಆರೋಪಿಯ ಬಗ್ಗೆ ಗೊತ್ತಿರಲಿಲ್ಲ. ದಿಃ 04.12.2022ರಂದು ಆರೋಪಿ ಮತ್ತು ಗಿರೀಶ್ ನಮ್ಮ ಮನೆಗೆ ಬಂದು ರೂ.5 ಲಕ್ಷ ಹಣವನ್ನು ನಗದು ರೂಪದಲ್ಲಿ ನಮ್ಮಿಂದ ಪಡೆದುಕೊಂಡಿರುತ್ತಾರೆ. ನಂತರ ದಿಃ 23.02.2023 ರಂದು ನಾವು ರೂ.2 ಲಕ್ಷ ಹಣವನ್ನು

ಗಿರೀಶ್ ಖಾತೆಗೆ ಟ್ರಾನ್ಸ್ ಫರ್ ಮಾಡಿರುತ್ತೇವೆ. ದಿಃ 04.03.2023 ರಂದು ನನ್ನ ತಾಯಿ ಒಡವೆಗಳನ್ನು ಮಾರಾಟ ಮಾಡಿ ರೂ.3,60,000/- ಹಣ ಹಾಗೂ ಕೈ ಸಾಲ ಮಾಡಿ ತಂದು ರೂ.3,95,000/- ಹಣ ಒಟ್ಟು ರೂ.7,55,000/- ಹಣವನ್ನು ನಗದು ರೂಪದಲ್ಲಿ ಗಿರೀಶ್ ಗೆ ನೀಡಿರುತ್ತೇವೆ. ಒಟ್ಟು ರೂ.18 ಲಕ್ಷ ಹಣವನ್ನು ನಾವು ನೀಡಿರುತ್ತೇವೆ. ನಾವು ಸದರಿ ಗಿರೀಶನ ವಿರುದ್ಧ ನಮಗೆ ನಂಬಿಸಿ ಮೋಸ ಮಾಡಿರುವ ಬಾಬ್ತು ಮಡಿಕೇರಿಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹಾಕಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಈ ಆರೋಪಿಯ ವಿರುದ್ಧ ಕೂಡ ಆ ಪ್ರಕರಣ ಹಾಕಿದ್ದೇವೆ ಎನ್ನುತ್ತಾರೆ. ನೀವೇನಾದರು ನೌಕರಿಗೆ ಅಪ್ಲೈ ಮಾಡಿದ ಅಪ್ಲಿಕೇಷನ್ ಏನಾದರು ಗಿರೀಶ್ ಗೆ ನೀಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಗಿರೀಶ್ ರವರು ನನ್ನ ರೆಸ್ಯೂಮ್, ಮಾರ್ಕ್ಸ್ ಕಾರ್ಡ್ ಗಳನ್ನು ಕೇಳಿ ಪಡೆದುಕೊಂಡಿದ್ದರು. ಗಿರೀಶ್ ರವರು ತನಗೆ ಆರೋಗ್ಯ ಇಲಾಖೆ ಹಾಗೂ ಇತರೆ ಸರ್ಕಾರಿ ಕಚೇರಿಗಳಲ್ಲಿ ಬ್ಯಾಕ್ ಲಾಗ್ ಹುದ್ದೆ ಕೊಡಿಸುತ್ತೇನೆ ಎಂದು ನಂಬಿಸಿದ್ದರು.

ನಾನು, ನನ್ನ ತಾಯಿ ಹಾಗೂ ಕ್ರಿಪ್ಟೋ ಕರೆನ್ಸಿ ವ್ಯವಹಾರ ಮಾಡುತ್ತೇವೆ ಎಂದರೆಸರಿಯಲ್ಲ. ಕ್ರಿಪ್ಟ್‌ಕಾಯಿನ್ ಗ್ರೂಪಿನಲ್ಲಿ ನಾನು, ನನ್ನ ತಾಯಿ ಇದ್ದೇವೆ ಎಂದರೆ ನಾನು ಮಾತ್ರ ಇದ್ದೇನೆ, ನನ್ನ ತಾಯಿ ಇಲ್ಲ. ರೂ.18 ಲಕ್ಷದ ಪೈಕಿ ಸುಮಾರು ರೂ.10 ಲಕ್ಷ ಹಣ ಕೈ ಸಾಲ ಮಾಡಿ ತಂದು ನಾವು ಗಿರೀಶ್ ಗೆ ನೀಡಿದ್ದೇವೆ. ನಮ್ಮ ಹಾಗೂ ಗಿರೀಶ್ ನಡುವೆ ಕ್ರಿಪ್ಟೋ ಕರೆನ್ಸಿ ವ್ಯವಹಾರ ಇದ್ದು, ಸದರಿ ವ್ಯವಹಾರದಲ್ಲಿ ಗಿರೀಶ್ ರವರು ದುಡ್ಡು ನೀಡಿಲ್ಲ ಎಂದು ನಾವು ಅವರ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಗಿರೀಶನ ವಿರುದ್ದ ದೂರು ನೀಡಿದಾಗ ಪೊಲೀಸರು ಗಿರೀಶನನ್ನು ಠಾಣೆಗೆ ಕರೆಸಿ, ಒಂದು ದಿನ ಠಾಣೆಯಲ್ಲೇ ಇರಿಸಿ ಮಾರನೆ ದಿನ ಆರೋಪಿಯನ್ನು ಗಿರೀಶ ಕರೆಸಿಕೊಂಡು ಚೆಕ್ ನೀಡದಿದ್ದರೆ ನಿಮ್ಮಿಬ್ಬರ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಪೊಲೀಸರು ಹೆದರಿಸಿದರು ಎಂದರೆ ಸರಿಯಲ್ಲ. ಆಗ ಆರೋಪಿ ತನ್ನ ಮಗನನ್ನು ಕರೆಸಿ ಆತನ ಚೆಕ್ಕನ್ನು ನನ್ನ ತಾಯಿಗೆ ಪೊಲೀಸ್ ಠಾಣೆಯಲ್ಲಿ ನೀಡಿದರು ಎಂದರೆ ಸರಿಯಲ್ಲ. ಗಿರೀಶ್ ಗೂ ಹಾಗೂ ಆರೋಪಿಗೂ ವ್ಯವಹಾರ ಇತ್ತು ಎಂದರೆ ಸರಿ. ನಮ್ಮ ಖಾತೆಯಿಂದ ಆರೋಪಿಯ ಖಾತೆಗೆ ರೂ.1 ಕೂಡ ವರ್ಗಾವಣೆ ಮಾಡಿಲ್ಲ ಎಂದರೆ ಸರಿ. ಗಿರೀಶನಿಗೆ ರೂ.18 ಲಕ್ಷ ಹಣ ಕೊಡುವ ವ್ಯವಹಾರವನ್ನು ಆರೋಪಿಯ ಸಮಕ್ಷಮ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿ ಯಾರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ನೌಕರಿಗಾಗಿ ಆನ್

ಲೈನ್ ಅಪ್ಲಿಕೇಷನ್ ಆಗಲಿ ಮ್ಯಾನುಯಲ್ ಅಪ್ಲಿಕೇಷನ್ ಹಾಕಿಲ್ಲ ಎಂದರೆ ಸರಿ. ನಮಗೂ ಹಾಗೂ ಗಿರೀಶ್‌ಗೂ ವ್ಯವಹಾರ ಇದೆಯೇ ಹೊರತು ಆರೋಪಿಗೂ ನಮಗೆ ಯಾವುದೇ ವ್ಯವಹಾರ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಹೆದರಿಸಿ ಪೊಲೀಸ್ ಠಾಣೆಯಲ್ಲಿ ಅವರ ಚೆಕ್ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 04.12.2022 ರಂದು ನಾವು ಗಿರೀಶ್ ಗೆ ರೂ.5 ಲಕ್ಷ ಹಣ ನೀಡಿದ ಬಗ್ಗೆ ಅವರಿಂದ ಯಾವುದೇ ದಾಖಲೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಗಿರೀಶ್ ಗೆ ರೂ.5 ಲಕ್ಷ ಹಣ ನೀಡಿರುತ್ತೇವೆ, ಆ ಹಣವನ್ನು ಗಿರೀಶ್ ಆರೋಪಿ ಖಾತೆಗೆ ಹಾಕಿರುತ್ತಾರೆ. ನನ್ನ ತಾಯಿ ಆಭರಣಗಳನ್ನು ಗಿರವಿ ಇಟ್ಟು ಹಣ ತಂದು ಗಿರೀಶ್ ಗೆ ನೀಡಿದ್ದ ಬಗ್ಗೆ ಈಗಾಗಲೇ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಫಿರ್ಯಾದಿ ನನ್ನ ತಾಯಿಯಾಗಿದ್ದು ಅವರಿಗೆ ಸಹಾಯ ಮಾಡಲು ಅವರ ಪರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಗಿರೀಶ್ ಗೆ ಹಣ ಪಾವತಿ ಮಾಡಿದ ಬಗ್ಗೆ ದಾಖಲೆಗಳನ್ನು ನಾವು ಈಗಾಗಲೇ ಹಾಜರು ಮಾಡಿದ್ದೇವೆ. ನಾವು ಆರೋಪಿಗೆ ನೇರವಾಗಿ ಹಣ ಪಾವತಿ ಮಾಡಿಲ್ಲ, ಸದರಿ ಹಣವನ್ನು ನಾವು ಗಿರೀಶ್ ಗೆ ಪಾವತಿ ಮಾಡಿದ್ದೇವೆ. ನಾನು ನಮ್ಮ ಹಾಗೂ ಗಿರೀಶ್ ನಡುವೆ ಕ್ರಿಪ್ಟೋ ಕರೆನ್ಸಿ ವ್ಯವಹಾರ ಇದ್ದು, ಈ ಬಾಬ್ತು ಆರೋಪಿಯನ್ನು ಠಾಣೆಗೆ ಕರೆಸಿ ಆರೋಪಿಯಿಂದ 5 ಚೆಕ್ಕುಗಳನ್ನು ಪಡೆದುಕೊಂಡು ಹಂತ ಹಂತವಾಗಿ ಒಂದೊಂದು ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಪ್ರಕರಣಗಳನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ರೂ.18 ಲಕ್ಷ ಹಣ ಕೊಡುವಷ್ಟು ನಮಗೆ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಡಿಕೇರಿ.